ಕುರುಡನಾಗುತ್ತಾನೆ.

ಈ ಕಥೆಯಲ್ಲಿ, ಥೇಬ್ಸ್ ಪಟ್ಟಣವನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡಿದ್ದ ಸ್ಫಿಂಕ್ಸ್, ಅದು ಕೇಳುವ ಒಗಟಿಗೆ ಸರಿಯಾಗಿ ಉತ್ತರಿಸಿದ ಹೊಸಬರಿಗೆ ಮಾತ್ರ ಪಟ್ಟಣದ ಒಳಕ್ಕೆ ಪ್ರವೇಶ ನೀಡುತ್ತಿತ್ತು. ಇಲ್ಲದಿದ್ದರೆ ಅವರನ್ನು ಅದು ತಿಂದುಬಿಡುತ್ತಿತ್ತು. ಅದು ಈಡಿಪಸ್‌ಗೆ ಕೇಳಿದ ಪ್ರಶ್ನೆ: 'ಬೆಳಿಗ್ಗೆ ನಾಲ್ಕು ಕಾಲಿನಲ್ಲಿ ನಡೆದು, ಮಧ್ಯಾಹ್ನ ಎರಡು ಕಾಲಿನಲ್ಲಿ ನಡೆದು, ಸಂಜೆ ಮೂರು ಕಾಲಿನಲ್ಲಿ ನಡೆಯುವ ಪ್ರಾಣಿ ಯಾವುದು?' ಎಂದು.

'ಮನುಷ್ಯ' ಎಂದು ಉತ್ತರಿಸಿದ ಈಡಿಪಸ್, ಪಟ್ಟಣವನ್ನು ಪ್ರವೇಶಿಸಿ ಅಲ್ಲಿಯ ಪದ್ಧತಿಯಂತೆ ರಾಣಿಯನ್ನು ಮದುವೆಯಾದ.

ಈ ಗ್ರೀಕ್ ಪುರಾಣದ ಕಥೆಯ ಆಧಾರದ ಮೇಲೆ ಪ್ರಸಿದ್ಧ ಗ್ರೀಕ್ ನಾಟಕಕಾರ ಸೋಫೋಕ್ಲಿಸ್ 'ಈಡಿಪಸ್ ರೆಕ್ಸ್' ಎಂಬ ಸುಪ್ರಸಿದ್ಧ ದುರಂತ ನಾಟಕವನ್ನು ಬರೆದಿದ್ದಾನೆ. ಇದು ಅನೇಕ ಬಾರಿ ಬೇರೆಬೇರೆ ಭಾಷೆಗಳಿಗೆ ಅನುವಾದವಾಗಿದೆ. ಅದರ ಮೇಲೆ ಬೇಕಾದಷ್ಟು ವಿಮರ್ಶೆ, ವಿಶ್ಲೇಷಣೆಗಳು ಬಂದಿವೆ, ಬರುತ್ತಿವೆ.

ಪ್ರಖ್ಯಾತ ಮನಃಶಾಸ್ತ್ರಜ್ಞನಾದ ಸಿಗ್ಮಂಡ್ ಫ್ರಾಯ್ಡ್‌ನ 'ಈಡಿಪಸ್ ಕಾಂಪ್ಲೆಕ್ಸ್' ಈ ಗ್ರೀಕ್ ನಾಟಕದ ಆಧಾರದ ಮೇಲೆ ರೂಪುಗೊಂಡದ್ದು. ಈಡಿಪಸ್ ಕಾಂಪ್ಲೆಕ್ಸ್‌ನ ತಳಹದಿಯ ಮೇಲೆ ಅನೇಕ ಮನಃಶಾಸ್ತ್ರದ ಸಿದ್ಧಾಂತಗಳು ಬಂದಿವೆ, ಅನೇಕ ಕಥೆ ಕಾದಂಬರಿಗಳು ಸೃಷ್ಟಿಯಾಗಿವೆ, ಸಿನಿಮಾಗಳೂ ಬಂದಿವೆ.

ಈ ಕಥೆಯಲ್ಲಿ ಬರುವ ಒಗಟಿನ ಕೊನೆಯ ಭಾಗದಲ್ಲಿ ಮನುಷ್ಯನನ್ನು 'ಮೂರು ಕಾಲಿನ ಪ್ರಾಣಿ' ಎಂದು ಗುರುತಿಸಿ, ಆ ಕಾಲದಲ್ಲಿಯೇ ಅಂದರೆ ಕ್ರಿ.ಪೂ. 400 ವರ್ಷಗಳಿಗೂ ಮೊದಲೇ ವೃದ್ಧಾಪ್ಯದಲ್ಲಿ ಊರುಗೋಲಿನ ಪ್ರಾಮುಖ್ಯತೆಯನ್ನು ಜನರು ಮನಗಂಡಿದ್ದರು ಎಂದು ಸ್ಪಷ್ಟವಾಗುತ್ತದೆ

ಊರುಗೋಲು ಎನ್ನುವುದು ಚಲನೆಯ ಸಂಕೇತವನ್ನು ಸೂಚಿಸುತ್ತದೆ. ಸ್ವಾಮಿ ವಿವೇಕಾನಂದರು ಭುಜದ ಎತ್ತರದ ದಂಡವನ್ನು ಊರುಗೋಲಾಗಿ ಹಿಡಿದಿರುವ ಚಿತ್ರ ಅವರು ಪರಿವ್ರಾಜಕರಾಗಿದ್ದಾಗ ದೇಶವನ್ನೆಲ್ಲಾ ಸುತ್ತಿದ ದಿನಗಳನ್ನು ನೆನಪಿಸುತ್ತವೆ. ಭಾರತೀಯ ಸನ್ಯಾಸಿಗಳ ಜೊತೆ ದಂಡವು ಅವಿಭಾಜ್ಯ ಅಂಗವಾಗಿದೆ. ಹಾಗೆಯೇ ಸಮುದ್ರವನ್ನು ವಿಭಜಿಸಿ ಯಹೂದಿಗಳನ್ನು ಸುರಕ್ಷಿತವಾಗಿ ಅತ್ತ ಕಡೆ ಕರೆತರಲು ನೆರವು ನೀಡಿದ ಮೋಸಸ್ ಹಿಡಿದದ್ದು ಒಂದು ಊರುಗೋಲು. ಕ್ರಿಸ್ತನು ಕುರಿಗಾಹಿಯಾಗಿ ಊರುಗೋಲನ್ನು ಹಿಡಿದಿರುವ ಅನೇಕ ಪ್ರಸಿದ್ಧ ಆಕರ್ಷಕ ಚಿತ್ರಗಳಿವೆ. ಜಪಾನಿನ ಝೆನ್ ಗುರುಗಳು ಕೈಯಲ್ಲಿ ದಂಡವನ್ನು ಹಿಡಿದು ಸಂಚರಿಸುತ್ತಿದ್ದರು. ಹೀಗೆ ಊರುಗೋಲಿನ ಪ್ರಭಾವವು ಅನೇಕ ಧರ್ಮಗಳಲ್ಲಿ ಹಾಸುಹೊಕ್ಕಾಗಿದೆ.

ಇವೆಲ್ಲಕ್ಕಿಂತ ಮುಖ್ಯವಾಗಿ ಊರುಗೋಲನ್ನು 'ಕೋಲು' ಎಂದು ಕರೆದು, ಅದಕ್ಕೆ ಕವನಗಳಲ್ಲೂ ಹಿರಿಮೆಯನ್ನು ತಂದುಕೊಟ್ಟಿದ್ದೇವೆ. ಏಕೆಂದರೆ ಅದನ್ನು ಹಿಡಿದಿದ್ದವರು ಮಹಾತ್ಮ ಗಾಂಧಿ. ಮಕ್ಕಳ



ಪದ್ಯವು ಅವರನ್ನು ಚಿತ್ರಿಸಿದ್ದು ಹೀಗೆ:

ಕೈಯಲ್ಲೊಂದು ಕೋಲು
ಅವರಿಗಿಲ್ಲ ಸೋಲು
ಅವರು ಯಾರು ಗೊತ್ತೇ
ಅವರೇ ನಮ್ಮ ಗಾಂಧೀ

ಇದನ್ನು ಓದಿದೊಡನೆಯೇ ಗಾಂಧಿಯವರು ತಮ್ಮ ಕೋಲನ್ನು ಊರಿಕೊಂಡು ಏಕಾಗ್ರತೆಯಿಂದ ನಡೆಯುತ್ತಿರುವ ಚಿತ್ರವು ಮನದಲ್ಲಿ ಮೂಡುತ್ತದೆ.

ಗಾಂಧೀಜಿಯವರ ಊರುಗೋಲು ಕನ್ನಡಿಗರಿಗೆ ಬಹಳ ಮುಖ್ಯ. ಏಕೆಂದರೆ ಅದು ನಮ್ಮ ಮೊದಲ ರಾಷ್ಟ್ರಕವಿ ಗೋವಿಂದ ಪೈ ಅವರ ಹಿರಿಯರು ಉಪಯೋಗಿಸುತ್ತಿದ್ದ ಊರುಗೋಲು! ಗೋವಿಂದ ಪೈ ಅವರ ಮಂಗಳೂರಿನ ನಿವಾಸಕ್ಕೆ ಅವರ ಆಪ್ತಮಿತ್ರರೂ ಗಾಂಧೀಜಿಯವರ ಒಡನಾಡಿಗಳೂ ಆಗಿದ್ದ ಕಾಕಾ ಕಾಲೇಲ್ಕರ್ ಅವರು ಬರುತ್ತಾರೆ. ಅವರಿಂದ ಗಾಂಧೀಜಿಯವರ ದಂಡಿಯಾತ್ರೆಯ ಬಗ್ಗೆ ತಿಳಿದು, ಇಂಥ ನಡಿಗೆಯ ಸಮಯದಲ್ಲಿ ಕೈಯಲ್ಲಿ ಒಂದು ಕೋಲು ಇರುವುದು ಒಳಿತು ಎಂದು ಚಿಂತಿಸಿ, ಗೋವಿಂದ ಪೈ ಅವರು ತಮ್ಮಲ್ಲಿದ್ದ ಊರುಗೋಲನ್ನು ಅವರಿಗೆ ನೀಡುತ್ತಾರೆ. ಮಹಾತ್ಮ ಗಾಂಧಿಯವರು ಅದನ್ನು ದಂಡಿಯಾತ್ರೆಯ ಸಮಯದಲ್ಲಿ ಬಳಸುತ್ತಾರೆ. ಮುಂದೆಯೂ ಅದು ಅವರ ಕೈಯಲ್ಲಿ ಇರುತ್ತದೆ. ಗಾಂಧೀಜಿ ಅವರ ಕೈಯಲ್ಲೊಂದು ಕೋಲು ಎಂದರೆ ಅದು ನಮ್ಮ ಗೋವಿಂದ ಪೈಗಳು ನೀಡಿದ್ದ ಊರುಗೋಲು! ದಂಡಿಯಾತ್ರೆಯಲ್ಲಿ ಉಪಯೋಗವಾದ ಈ ಊರುಗೋಲು ಕೂಡ ಚಲನೆಯ ಸಂಕೇತ. ಭಾರತವು ದಾಸ್ಯದಿಂದ ಸ್ವಾತಂತ್ರ್ಯದೆಡೆಗೆ ಚಲಿಸಿದ ಸಂಕೇತ ಈ ಮಹಾತ್ಮ ಗಾಂಧಿಯವರ ಊರುಗೋಲು.

ಉದ್ಯಾನವನದಲ್ಲಿ ಬೆಳಗಿನ ನಡಿಗೆ ದೇಹಕ್ಕೆ ಎಷ್ಟು ಮುಖ್ಯವೋ ಮನಸ್ಸನ್ನು ಪ್ರಫುಲ್ಲಗೊಳಿಸಲೂ ಅಷ್ಟೇ ಮುಖ್ಯ. ಅಲ್ಲಿ ನಮ್ಮ ಮನಸ್ಸನ್ನು ಮುದಗೊಳಿಸುವ ಕೆಲವು ಸಂಗತಿಗಳೆಂದರೆ ವಾಕಿಂಗ್ ಸ್ಟಿಕ್ ಹಿಡಿದು ಅದರ ಆಧಾರದ ಮೇಲೆ ನೇರವಾಗಿ ನಡೆದು ಬರುವ ಹಿರಿಯರು ನಮ್ಮನ್ನು ನೋಡಿ ಮುಗುಳ್ನಗೆಯ ಸುಪ್ರಭಾತವನ್ನು ಹೇಳುವ ಪರಿ. ಅವರ ನಡಿಗೆಯಲ್ಲಿ ಎಷ್ಟು ಗಟ್ಟಿತನವಿರುತ್ತದೋ ಅಷ್ಟೇ ಗಾಂಭೀರ್ಯ ಅವರ ಮುಖದಲ್ಲಿ ಇರುತ್ತದೆ. ಅದು ಜಂಬದಿಂದ ಬಂದದ್ದಲ್ಲ; ಮಾಗಿದ ವಯಸ್ಸಿನ ಪರಿಣಾಮವಾಗಿ ಉಂಟಾದ ಪರಿಪಕ್ವತೆ ಅಲ್ಲಿ ಕಂಡುಬರುತ್ತದೆ. ಅದೇ ಅವರನ್ನು ಇನ್ನೊಮ್ಮೆ ನೋಡೋಣ ಎನ್ನುವಂತೆ ಆಕರ್ಷಕವಾಗಿ ಮಾಡುವುದು. ಅವರ ಗಾಂಭೀರ್ಯಕ್ಕೆ ಅವರು ಹಿಡಿದ ಊರುಗೋಲು ಒಂದು ಚಿನ್ನದ ಮೆರುಗನ್ನು ತಂದುಕೊಡುತ್ತದೆ. ಊರುಗೋಲಿನ ಪ್ರಭಾವ ಅಂಥದು.

ಇನ್ನು ಕೆಲವರು ಊರುಗೋಲಿನ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿ ನಿಧಾನವಾಗಿ ನಡೆಯುತ್ತಿರುತ್ತಾರೆ. ಮತ್ತೆ ಹಲವರು ಊರುಗೋಲಿಲ್ಲದೇ ನಡೆಯುವಾಗ, 'ನಾಳೆಯಿಂದ ಊರುಗೋಲನ್ನು ತನ್ನಿ' ಎಂದು ಹೇಳಿಬಿಡೋಣ ಎನ್ನಿಸುವಂತೆ ಓಲಾಡುತ್ತಾ ನಡೆಯುತ್ತಾರೆ. ಹಾಗಾಗಿ ಊರುಗೋಲನ್ನು ಹಿಡಿದು / ಹಿಡಿಯದೆ ನಡೆಯುವ ಅನೇಕ ಮುಖಗಳ ಪರಿಚಯ ಆಗುತ್ತದೆ.

ಇವರೆಲ್ಲರನ್ನು ನೋಡಿದರೆ ಊರುಗೋಲನ್ನು ಹಿಡಿದು, ಹಿರಿತನವನ್ನು ವಾಸ್ತವವಾಗಿ ಕಂಡು, ವೃದ್ಧಾಪ್ಯವನ್ನು ಹೆದರಿಕೆಯಿಲ್ಲದೆ ಬರಮಾಡಿಕೊಂಡು, ಅದನ್ನು ಸಂತೋಷವಾಗಿ ಅನುಭವಿಸುತ್ತಿದ್ದವರು ಒಂದೆಡೆ, ವೃದ್ಧಾಪ್ಯವನ್ನು ಬರಮಾಡಿಕೊಳ್ಳಲು ಹೆದರಿ ಊರುಗೋಲಿಲ್ಲದೆ ಬಿದ್ದುಬಿಡುವಂತೆ ನಡೆಯುವ ಮಂದಿ ಇನ್ನೊಂದೆಡೆ ಕಂಡು ಬರುತ್ತಾರೆ.

ಮನುಷ್ಯನು ನೆಟ್ಟಗೆ ನಿಲ್ಲಬೇಕು ಎನ್ನುವುದಕ್ಕೆ ಬಹಳ ಆಳವಾದ, ವಿಶೇಷವಾದ ಅರ್ಥಗಳಿವೆ. ಹಾಗೆ ನಿಲ್ಲಲು ಸಾಧ್ಯವಾಗದಿದ್ದರೆ ಯಾವುದಾದರೂ ಊರುಗೋಲಿನ ಆಶ್ರಯವನ್ನು ತೆಗೆದುಕೊಂಡು ನೇರವಾಗಿ ನಿಲ್ಲಬೇಕು. ಮಾನವನಿಗೆ ತಾನು ನೆಟ್ಟಗೆ ನಿಲ್ಲಬೇಕು ಎನ್ನುವ ಆಕಾಂಕ್ಷೆ ಅವನ ಅಂತಃಸತ್ವದಿಂದ ಸ್ವಾಭಾವಿಕವಾಗಿ ಬೆಳೆದಿರುತ್ತದೆ. ಆದರೆ ಬಾಹ್ಯದ ಆಕರ್ಷಣೆಗಳ ಪ್ರಭಾವಕ್ಕೆ ಒಳಗಾದರೆ, ಸೊಟ್ಟಗಾಗಿದ್ದು ಏಕೆ, ನೆಲಕ್ಕೆ ಬಿದ್ದದ್ದು ಕೂಡ ತಿಳಿಯುವುದಿಲ್ಲ. ಹೀಗೆ ಸೊಟ್ಟಗೆ ನಿಂತ, ಕೆಳಗೆ ಬಿದ್ದ ಜನರು ಅಧಿಕಾರ ಅಥವಾ ಧನದ ಮದದಿಂದ ಬೀಗುತ್ತಾ ತನ್ನ ಸ್ಥಿತಿಯೇ ಸರಿ ಎಂದು ಅಹಂಕಾರದಿಂದ ಮೆರೆಯುತ್ತಾರೆ. ಸರಿ–ತಪ್ಪುಗಳನ್ನು ತುಲನೆ ಮಾಡಿ ಆರಿಸಿಕೊಳ್ಳಲಾರದವರು ಸೊಟ್ಟ ಸ್ಥಿತಿಯೇ ಸಮತೋಲನವೆಂದು, ಸರಿಯಾದುದೆಂದು ಅದನ್ನು ಅಳವಡಿಸಿಕೊಳ್ಳುತ್ತಾರೆ. ಅಂಥ ಸಮಯದಲ್ಲೇ, ಜಗವೆಲ್ಲ ಮಲಗಿರಲು ಅವನೊಬ್ಬ ನಮ್ಮ ಮನದಿಂದಲೇ ಎದ್ದು ಬರಬೇಕಾಗುತ್ತದೆ. ನಮ್ಮ ಮನವು ಬಾಗುವುದರಿಂದ ತಪ್ಪಿಸಿಕೊಳ್ಳಲು ಕಾಲಕಾಲಕ್ಕೆ ಸೂಕ್ತ ಊರುಗೋಲನ್ನು ನಾವೇ ಕಲ್ಪಿಸಿ ನಿರ್ಮಿಸಿಕೊಂಡು ಅದರ ಆಧಾರವನ್ನು ಪಡೆಯಬೇಕು. ಅದು ಸಾಧ್ಯವಾದರೆ ನಾವು ಮಾಗುತ್ತೇವೆ, ಹಿರಿಯರಾಗುತ್ತೇವೆ.

ಎಲ್ಲರಿಗೂ ಎರಡು ಕಾಲುಗಳು ಮೂರು ಕಾಲಾಗುವ ಸಮಯ ಬಂದೇ ಬರುತ್ತದೆ. ಆಗ ಅದನ್ನು ಪ್ರೀತಿಯಿಂದ ಸ್ವಾಗತಿಸಬೇಕು. ಊರುಗೋಲು ಹಿಡಿದು ಹಿರಿಯರಾಗಬೇಕು. ಊರುಗೋಲು ಹಿಡಿದ ಹಿರಿಯರಾಗಬೇಕು.

ಪ್ರತಿಕ್ರಿಯಿಸಿ: feedback@sudha.co.in

